# ಕನ್ನಡಿಗ

ವಿಶ್ವ ಭಾರತಿ ಪ್ರಕಟಣಾಲಯ, ಹುಬ್ಬಳ್ಳಿ

ಸಂಪಾದಕರು : ಹುಚ್ಚೇಶ್ವರ ಮೇದಿ

**'KANNADIGA'**

*VISHVA BHARATI*
*Publication, Hubli-580032.*
*Editor* : **H. A. MEDI**


# ಅಂತಾರಾಷ್ಟ್ರೀಯ ವ್ಯಾಪಾರೋದ್ಯಮ ವಿಶೇಷ ಸಂಚಿಕೆ

**" ಕನ್ನಡಿಗ " ಪತ್ರಿಕೆಯ 42 ನೆ ಜನ್ಮದಿನ ಸಂಚಿಕೆ**



ಪತ್ರಿಕೋದ್ಯಮದ ಭೀಷ್ಮ

**ಮೊಹರೆ ಹನುಮಂತರಾಯರು**



ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ಮಹಾಪೌರ ಶ್ರೀ ಬಿ. ಎಸ್. ಪಾಟೀಲರು, ಕರ್ನಾಟಕ ರಾಜ್ಯೋತ್ಸವ ದಿನದಂದು ಮೂರುಸಾವಿರ ಮಠದ ಜಗದ್ಗುರುಗಳ ಸಮ್ಮುಖದಲ್ಲಿ ಭಾರತ ಸ್ವಾತಂತ್ರ್ಯ ಹೋರಾಟಗಾರರೂ, ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಭಾಗವಹಿಸಿದ "ಕನ್ನಡಿಗ" ಪತ್ರಿಕಾ ಸಂಪಾದಕ ಶ್ರೀ ಹುಚ್ಚೇಶ್ವರ ಮೇದಿಯವರನ್ನು ಸತ್ಕರಿಸಿದಾಗ.




ಕರ್ನಾಟಕ ಬ್ಯಾಂಕ ಲಿಮಿಟೆಡ್

● ನೂತನ ಡಾಯರೆಕ್ಟರ ●

**ಶ್ರೀ ಕೆ. ಬಿ. ದೇಸಾಯಿ**

**November-1992** **Rs. 6**

## ಕರ್ನಾಟಕ ವಿಕಾಸ ಸಮಿತಿಯ ಅಧ್ಯಕ್ಷ ಡಾ। ಸಿದ್ಧಯ್ಯ ಪುರಾಣಿಕ ಬೆಂಗಳೂರ



ಆದರ್ಶಕ್ಕೆ ಅರ್ಪಿತವಾದ "ಕನ್ನಡಿಗ" ವಾರಪತ್ರಿಕೆಯು 42 ನೆಯ ವರ್ಷದಲ್ಲಿ ಅಡಿಯಿಡುತ್ತಲಿರುವದು ಕಡು ಸಂತಸದ ಸಂಗತಿಯಾಗಿದೆ. ದೀರ್ಘಾಯುಷ್ಯವೊಂದೇ ಇದರ ಹಿರಿಮೆಯಲ್ಲ. ತನ್ನ ಮೇಲ್ಮಟ್ಟವನ್ನು ಕಾಯ್ದುಕೊಂಡು ಆಶೆ, ಆಮಿಷ, ಹುಸಿಗಳಿಗೆ ಒಳಗಾಗದೆ ನಿಷ್ಠೆಯೊಡನೆ ನಾಡು - ನುಡಿಗಳ ಸೇವೆಮಾಡುತ್ತ ಬಂದಿರುವದೂ ಅದರ ಹಿರಿಮೆ, ಹೆಗ್ಗಳಿಕೆ.

"ಕನ್ನಡಿಗ" ಚಿರಾಯುವಾಗಲೆಂದು ಹಾರೈಸುತ್ತೇನೆ.

— ಸಿದ್ಧಯ್ಯ ಪುರಾಣಿಕ

---

● ಸುವಿಖ್ಯಾತ ಪತ್ರಿಕೋದ್ಯಮಿ " ಇಲಸ್ಟ್ರೇಟೆಡ್ ವೀಕ್ಲಿ " ಮಾಜಿ ಸಂಪಾದಕ ●

## ಶ್ರೀ ಎಂ. ವ್ಹಿ. ಕಾಮತರ ಶುಭಾಶಯ

ಪ್ರಿಯ ಮೋದಿಯವರೆ;

" ಕನ್ನಡಿಗ " ಪತ್ರಿಕೆ ಬಿದಿಗೆಯ ಚಂದ್ರನಂತೆ ಪ್ರವರ್ಧಮಾನವಾಗಿ ಬೆಳೆಯಲಿ ಎಂದು ಆಶಿಸುವೆ.

ಮುಂಬೈ — ಮ. ವಿ. ಕಾಮತ

---



## ಸನ್ಮಾನ ಶ್ರೀ ವೀರೇಂದ್ರ ಹೆಗಡೆಯವರು

# ವಾಗ್ಮಿತೆ ವಾಙ್ಮಯ ಸಿದ್ಧಿಯ ಡಾ|| ಸಿದ್ಧಯ್ಯ ಪುರಾಣಿಕರು

ಶ್ರೀ ಎನ್. ಕೆ. ಕುಲಕರ್ಣಿಯವರು ಸ್ವತಃ ವಾಗ್ಮಿಗಳು ಹಾಗು ವಾಙ್ಮಯ ಸಿದ್ಧಿಯನ್ನು ಪಡೆದವರು. ಡಾ. ಸಿದ್ಧಯ್ಯ ಪುರಾಣಿಕರ ಜೀವನ ಹಾಗು ವಾಙ್ಮಯವನ್ನು ಸ್ನೇಹಶೀಲ ದೃಷ್ಟಿಯಿಂದ ಅಭ್ಯಾಸಮಾಡಿರುವದರಿಂದ ಬಹು ಮನೋಜ್ಞ ರೀತಿಯಲ್ಲಿ ಇಲ್ಲಿ ಚಿತ್ರಿಸಿದ್ದಾರೆ. ಡಾ. ಸಿದ್ಧಯ್ಯ ಪುರಾಣಿಕರು, ವಿವಿಧ ಹಂತಗಳಲ್ಲಿ ಸರಕಾರೀ ಸೇವೆಯನ್ನು ಮಾಡಿ ಸಾಹಿತ್ಯಾರಾಧನೆಮಾಡಿ ಲೋಕವಿಖ್ಯಾತರಾಗಿದ್ದಾರೆ. ಕರ್ನಾಟಕ ವಿಕಾಸ ಸಮಿತಿಯ ಅಧ್ಯಕ್ಷರಾಗಿ ಈಗ ಅವರು ಮಾಡುತ್ತಿರುವ ಅನುಪಮ ಸೇವೆ ಚಿರಸ್ಮರಣೀಯ. ಅವರು ಸೃಷ್ಟಿಸಿದ ಸಾಹಿತ್ಯ ಎಲ್ಲ ಪಂಡಿತ — ಪಾಮರರಿಗೂ ಪ್ರಿಯವೆನಿಸಿದೆ. ಶ್ರೀ ಕುಲಕರ್ಣಿಯವರು ತಮ್ಮ ಹೃದಯಾಂತರಾಳದ ಪ್ರೀತಿಯಿಂದ ಬಣ್ಣಿಸಿದ್ದು, ಸಮಯೋಚಿತ. ಕಾವ್ಯಾನಂದ ಕಾವ್ಯ ನಾಮದಿಂದ "ಮರುಳಸಿದ್ಧ" ವಚನ ಮತ್ತು ಇತರ ಸಾಹಿತ್ಯ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕರಿಸಿ ಜ್ಞಾನಪೀಠ ಪ್ರಶಸ್ತಿಕೊಡಲು ಯೋಗ್ಯವಾಗಿವೆ ಎಂದು ಹೇಳ ಬಯಸುತ್ತೇವೆ.

— ಸಂಪಾದಕರು.

ಕಳೆದ ನಾಲ್ಕು ದಶಕಗಳಲ್ಲಿ ನಮ್ಮ ಸ್ನೇಹ ಸೋಪಾನ ತನ್ನ ಆರೋಹಣದ ಶಿಖರವನ್ನು ಮುಟ್ಟಿ ಈಗ ಸುವರ್ಣೋದಯದಲ್ಲಿ ಮಾರ್ಪಟ್ಟಿದೆ. ಕಳೆದ ಕೆಲವು ತಿಂಗಳಲ್ಲಿ ನಡೆದ ನಮ್ಮ ಪತ್ರವ್ಯವಹಾರದಲ್ಲಿ ಈ ಸಂಬಂಧ ಶತಪತ್ರದಂತೆ ಅರಳಿದ ರುಜುವಾತಿದೆ. ಡಾ|| ಸಿದ್ಧಯ್ಯ ಪುರಾಣಿಕರು ಎಂತಹ ಶುದ್ಧ, ಸಿದ್ಧ ಸ್ನೇಹಜೀವಿ. ಎಂಬುದನ್ನು ಸ್ಪಷ್ಟಪಡಿಸಲು ಈ ಮಾತು ಹೇಳುತ್ತಿದ್ದೇನೆ. ಬಹುಮುಖ ಪ್ರತಿಭೆಯ ಅವರ ವ್ಯಕ್ತಿ ಮತ್ತೆ, ಅವರ ತುಂಬುಬದುಕು ಡಾ| ಪುರಾಣಿಕರು ಗಳಿಸಿರುವ ಆತ್ಯಂತಿಕ ಜನಪ್ರಿಯತೆ ಈ ಎಲ್ಲ ಸೇರಿ ಕರ್ನಾಟಕದ, ಕನ್ನಡದ ಭವಿಷ್ಯಕ್ಕೆ ಅವರನ್ನು ಒಂದು ಪ್ರಭಾವಿಯಾದ, ಅನಿವಾರ್ಯದ ಶಕ್ತಿಯನ್ನಾಗಿ ಕಲ್ಪಿಸಿವೆ. ಇತ್ತೀಚೆಗಂತೂ ರಾಜಕೀಯ ವಿ. ಐ. ಪಿ.ಗಳೂ ನಮ್ಮ ಸಿದ್ಧಯ್ಯನವರ ಸಲಹೆ, ಮಾರ್ಗದರ್ಶನಕ್ಕೆ ಮೊರೆ ಹೋಗುತ್ತಿದ್ದಾರೆ.

"ಕೊನೆಯುಸಿರು ಕನ್ನಡ ದುಡಿಮೆಗೆ" ಎಂಬ ಧ್ಯೇಯ ಮಂತ್ರವನ್ನು ಜಪಿಸುವ ಸಿದ್ಧಯ್ಯನವರು ನಿಸ್ಪೃಹತೆಯಿಂದ ಕನ್ನಡ ಕಾಯಕವನ್ನು ನಡೆಸುತ್ತಿರುವುದರಿಂದ ಅವರಿಗೆ ಮಂತ್ರಿ, ಮುಖ್ಯಮಂತ್ರಿ ಎಂಬ ಮುಲಾಜು ಇಲ್ಲ. ಸಲಹೆ ನೀಡಿದರೆ ಕನ್ನಡದ ಏಳ್ಗೆ ಮಾತ್ರವೇ ಅವರ ಕಣ್ಮುಂದೆ ಇರುತ್ತದೆ; ಕನ್ನಡಿಗರ ಹಿತರಕ್ಷಣೆಯೊಂದೆ ಅವರ ಏಕೈಕ ಗುರಿಯಾಗಿರುತ್ತದೆ. ಡೆಪ್ಯೂಟಿ ಕಮಿಶ್ನರ್ ಅಥವಾ ತತ್ಸಮವಾದ ಇನ್ನಾವುದೇ ಹುದ್ದೆಯಲ್ಲಿ ಸರಕಾರಿ ಸೇವೆ ಮಾಡಿದರೂ ಅವರಿಗೆ ಯಾವ ಪಾರ್ಟಿಯ, ಯಾವ ಆಡಳಿತದ, ಯಾವ ಮಂತ್ರಿಯ ಮುಲಾಜೂ ಇರಲಿಲ್ಲ. ಅನಾಸಕ್ತ ಕರ್ಮಯೋಗಿಯಾಗಿ ನಿಷ್ಕಾಮ, ನಿರಪೇಕ್ಷ ಬುದ್ಧಿಯಿಂದ ದುಡಿಯುವವನಿಗೆ ಯಾರಭಿಡೆ, ಯಾವ ಭಯ ? ಹೊರಗಿನ ಆಮಿಷಕ್ಕೆ, ಸ್ವಾರ್ಥಕ್ಕೆ ಜೊಲ್ಲು ಸುರಿಸದ, ಹಣದಾಸೆ ತೃಣವೆಂದು ಬಗೆದು ಆತ್ಮತೃಪ್ತಿಯೊಂದೇ ಪರಮಾತ್ಮ ಪ್ರೀತಿಯೆಂದು ದುಡಿಯುವವನಿಗೆ ಆ ದುಡಿಮೆಯ ಅನ್ನರುಚಿ ಹತ್ತದೆ ಏನು ? ಆರೋಗ್ಯಕರವಾಗದೆ ಏನು ?


ಸಿದ್ಧಯ್ಯನವರು ಸರಕಾರಿ ಹುದ್ದೆಯಲ್ಲಿರುವವರೆಗೂ ಅವರಿಗೆ ದೇವರ ಭಯವೊಂದೇ ಇದ್ದಿತಲ್ಲದೆ ಮಾನವಾಧಿಕಾರಿಗಳ ಭಯ ಇರಲಿಲ್ಲ. ಸ್ವತಃ ಅಧಿಕಾರದ ದರ್ಪದಿಂದ ದುಷ್ಪ್ರೇರಿತರಾಗದಂತಹ ದೊಡ್ಡ ಸಂಸ್ಕಾರ ಸಿದ್ಧಯ್ಯನವರು ಪಡೆದಿದ್ದರು.

" *An egoistic faith in the mental and vital being tinted by ambition, pride vanity, mental arrogance, vital self will, personal demand, desire for the petty satistactions of the lower nature is a low and smoke obscured flame that cannot burn upwards to heaven.* " ಎಂಬ ಶ್ರೀ ಅರವಿಂದರ ನುಡಿಗಳಲ್ಲಿ ಶ್ರದ್ಧೆಯಿಟ್ಟು ಸೇವೆ ಮಾಡಿದ ಇವರ ನಡೆ ಚೆನ್ನ, ನುಡಿಚೆನ್ನ; ನಡೆಮುಡಿ; ನುಡಿಮುಡಿ ಅಂತೆಯೇ ಇವರು ಅಂತಃಶುದ್ಧಿ, ತತ್ಪರತೆ [*sincerity*] ಇವರ ವಿವಿಧ ಅಧಿಕಾರಿ ಹುದ್ದೆಗಳ ಉಸಿರಾಗಿದ್ದವು. ಸದಾಚಾರ ಇವರ ಉಸಿರು, ಸದುವಿನಯ ಇವರ ಹೆಸರು, ಸುಸಂಸ್ಕೃತಿ ಇವರ ಬದುಕು ಎಂಬಂತಿತ್ತು ಇವರ ಸರಕಾರಿ ಸೇವೆ; ಅರ್ಥಾತ್ ಜನತಾಸೇವೆ. ಸೇವೆಯ ಈ ಅರ್ಪಣ ಬುದ್ಧಿಯ ಅವರ ಸಾಹಿತ್ಯ ಪ್ರೇರಣೆಯೂ ಆಗಿದೆ. " *The more*

*complete your faith, sincerity and surrender the more will grace and proteetion be with you and whem the grace and protection of the Divine Mother are with you what is there that can touch you or whom need you fear ?* " ಎಂದು ಶ್ರೀ ಅರವಿಂದರು '*The Mother*' ಎಂಬ ಚಿಕ್ಕ ಹೊತ್ತಿಗೆಯಲ್ಲಿ ಹೇಳಿದ ಹದುಳನುಡಿಯೆ ಸಿದ್ಧಯ್ಯನವರ ಹೊತ್ತು ಹೊತ್ತಿನ ಕೆನೆವಾತಾಗಿದೆ.

### ತುಂಬಿದ ಕೊಡ

ಎಪ್ಪತ್ತೈದರ ಪೂರ್ಣಕುಂಭವಾಗಿರುವ ಇವರ ಬದುಕು [ಜನನ ೧೮-೬-೧೯೧೮] ಸಿಹಿಕಹಿಗಳ, ಬಡತನ ಒಡೆತನಗಳ ಸಮ್ಮಿಶ್ರಣ. ಸಿರಿತನಕ್ಕೆ ಸೊಕ್ಕದ, ಬಡತನಕ್ಕೆ ಕುಗ್ಗದ ತುಂಬಿದ ಕೊಡ ನಮ್ಮ 'ಶ್ರೀಗಿರಿ'ಯ ಸಿದ್ಧಯ್ಯನವರು ಸಿರಿವಂತರು, ಅಧಿಕಾರಿಗಳಿಗಿಂತ ಬಡವರು, ಸಾಮಾನ್ಯ ಕಾಯಕದವರೆ ಇವರಿಗೆ ಹತ್ತಿರದವರು ಬಡವರಂತೆ ಬಡತನದ ವಿಶೇಷ ಪರಿಚಯವೂ ಇವರಿಗುಂಟು. ಡಿಸೆಂಬರ್ " ತುಷಾರ " ಪತ್ರಿಕೆಯಲ್ಲಿ ತಮ್ಮ ಬದುಕಿನ 'ಸಿಹಿ-ಕಹಿ' ಕುರಿತು ಸುಖದುಃಖ ಸಮದೃಷ್ಟಿ



ಯಿಂದ ಬರೆದಿದ್ದಾರೆ. ರಾಯಚೂರು ಜಿಲ್ಲೆಯ ದ್ಯಾಂಪುರದ ಹಳ್ಳಿಯ ನೆಲ, ಜನ್ಮವಿತ್ತ ತಂದೆ ತಾಯಿ, ಕಾವ್ಯಶಕ್ತಿ

[ 37 ನೇ ಪುಟ ನೋಡಿರಿ ]


## ದೇವಲ ಫೈನಾನ್ಸ ಪ್ರೈ. (ಲಿ.)

● ಫೋನ 50794 ●

[ ಬ್ಯಾಂಕೇತರ ಹಣಕಾಸು ಸಂಸ್ಥೆ ]

**G—9,** ಶ್ರೀನಾಥ ಕಾಂಪ್ಲೆಕ್ಸ ನ್ಯೂ ಕಾಟನ್ ಮಾರ್ಕೆಟ, ಹುಬ್ಬಳ್ಳಿ—580029

● ಕೆಳಗಿನವುಗಳಿಗೆ ಹಣಕಾಸು ಸಹಾಯ ಲಭ್ಯವಿದೆ ●

(1) ಲೀಸಿಂಗ್, ಹಾಯರ್ ಪರಚೇಜ ಮತ್ತು ಯೋಜನೆಗಳಿಗೆ. (2) ಕಟ್ಟಡಗಳಿಗೆ—ಮನೆ, ಹಾಸ್ಟೆಲ್ ಹೋಟೆಲ್ ಮತ್ತು ಜನೋಪಯೋಗಿ ಕಟ್ಟಡಗಳು. (3) ಎಲ್ಲ ತರಹದ ವಾಹನಗಳು ಎರಡು ಮೂರು ಗಾಲಿಗಳ ಸಹಿತ, ರೆಫ್ರಿಜಿರೇಟರ, ಟಿ. ವಿ. ವಾಶಿಂಗ್ ಮಶಿನ್, ಹೊಲಿಯುವ ರಾಟೆ ಇತ್ಯಾದಿ. (4) ಬಿಲ್ಸ/ಚೆಕ್ಸ ಡಿಸ್ಕೌಂಟ್ (5) ಅಲ್ಪಾವಧಿ ಸಾಲ.

● ಸಾನುಕೂಲ ಕರಾರುಗಳು ● ಅನುಕೂಲಕರ ಕಂತುಗಳು ● ಶೀಘ್ರ ಮಂಜೂರಾತಿ

● ನಿಮ್ಮ ಏಳ್ಗೆ ಮತ್ತು ಸಂತುಷ್ಟಿ ನಮ್ಮ ದೋರಣೆ ●

ನಿಮ್ಮ ಹಣಕಾಸಿನ ಆವಶ್ಯಕತೆಗಳಿಗೆ ಇಂದೇ ಸಂಪರ್ಕಿಸಿರಿ

ಎನ್. ಆರ್. ಹುಲಮನಿ

ಮ್ಯಾನೇಜಿಂಗ್ ಡೈರೆಕ್ಟರ್

**ಡಿಪಾಸಿಟ್ ಮೇಲೆ ಆಕರ್ಷಕ ಬಡ್ಡಿ ಕೊಡಲಾಗುವದು**

[ 13 ನೇ ಪುಟದಿಂದ ಬಂದದ್ದು ]

ಯನ್ನು ಕರುಣಿಸಿದ ಅಜ್ಜ, ತಂದೆ, ಸೋದರಮಾವಂದಿರನ್ನೂ ಸಾದರದಿಂದ ನೆನೆದಿದ್ದಾರೆ. ವಿದ್ಯಾರ್ಜನೆಯಲ್ಲಿ ರಾಷ್ಟ್ರೀಯ ಶಾಲೆಯ ಮುಖ್ಯೋಪಾಧ್ಯಾಯ ರಾ. ಭೀ. ದೇಸಾಯಿ, ಬದುಕಿನ ದಿಕ್ಕನ್ನೇ ಬದಲಿಸಿದ, ಇತಿಹಾಸ ಸಂಶೋಧಕ ಪಾಂ.ಬಿ. ದೇಸಾಯಿ, ಕಲಬುರ್ಗಿ, ಕಾಲೇಜ ಪ್ರಿನ್ಸಿಪಾಲ್ ಹಕ್ಕಾನಿಸಾಹೇಬ್ ಅವರನ್ನೆಲ್ಲ ಋಣದ ಪ್ರಜ್ಞೆಯಿಂದ ನೆನೆದಿದ್ದಾರೆ.

ಮೊದಲಿನಿಂದ ಇವರು ಬೆಳೆದುಬಂದ ಇವರನ್ನು ಬೆಳೆಯಿಸಿಕೊಂಡುಬಂದ ವಾತಾವರಣವೆ ಇವರಲ್ಲಿ ಜಾತ್ಯತೀತ, ಪ್ರೀತಿ ಪ್ರೇರಿತ ವಿಶಾಲ ದೃಷ್ಟಿಯನ್ನು ಮೂಡಿಸಿದೆ. ಜಾತಿ, ಭಾಷೆ, ಪ್ರದೇಶಗಳ ಗೋಡೆಗಳು ಇವರ ವ್ಯಕ್ತಿತ್ವವನ್ನು ಕುಬ್ಜಗೊಳಿಸಲಿಲ್ಲ. ಆದರೆ ಸೋದರ ಭಾಷೆಗಳ ಸದ್ಭಾವನೆಯನ್ನು ಮೂಡಿಸಿಕೊಂಡು ಕನ್ನಡಕ್ಕೆ ಕೊನೆಯುಸಿರೂ ಅರ್ಪಿತ ಎಂಬ ಶ್ರದ್ಧೆಯನ್ನು ಬೆಳೆಸಿಕೊಂಡು ಅದೇ ಮೌಲ್ಯಗಳನ್ನು ತಮ್ಮ ಕಾವ್ಯ, ಸಾಹಿತ್ಯಗಳಲ್ಲಿ ಎತ್ತಿ ಹಿಡಿದಿದ್ದಾರೆ. "ವಚನೋದ್ಯಾನ"ದಲ್ಲಿ ವಿಹರಿಸಿ "ವಚನನಂದನ"ದಲ್ಲಿ ನಲಿದಾಡಿ, ಮಂಕುತಿಮ್ಮನಿಗೊಬ್ಬ 'ಮರುಳ ಸಿದ್ಧ'ನೆಂಬ ತಮ್ಮನನ್ನು ನೀಡಿದ "ಕಾವ್ಯಾನಂದ"ರು "ಕನ್ನಡಂ ದೈವಮ್ಮೆ" ಎಂಬ ಸಾಲಿರಾಮಚಂದ್ರರಾಯರ ಅಭಿಮಾನಧನದ ಸಿರಿಯನ್ನು ಹೆಚ್ಚಿಸಿದ್ದಾರೆ; ಪ್ರೀತಿಮೂಲವಾದ ಜಾತ್ಯತೀತ ಭಾವನೆಯನ್ನು ಎತ್ತಿ ಹಿಡಿದಿದ್ದಾರೆ.

## ಸುಗ್ಗಿಯ ಕಾಲ

ಡೆಪ್ಯೂಟಿ ಕಮೀಶನರ ಹುದ್ದೆಯಲ್ಲಿದ್ದುಕೊಂಡು ಸಾಹಿತ್ಯದಲ್ಲೂ ಅಷ್ಟೇ ಒಂದು ಉನ್ನತ ಗೋಪುರವನ್ನೂ ತಮ್ಮ ಸೃಜನಶೀಲ ಸೃಜನೇತರ ಕೃತಿಗಳ ಮೂಲಕ ನಿರ್ಮಿಸಿಕೊಂಡಿದ್ದಾರೆ. ಇಂತಹದೇ ಹುದ್ದೆಯಲ್ಲಿದ್ದು ಸಾಹಿತ್ಯದ ಸರಹದ್ದುಗಳನ್ನು ವಿಸ್ತರಿಸಿದ ಪೂಜ್ಯ ಮಾಸ್ತಿ ಅವರಿಗೊಬ್ಬ ತಮ್ಮನಾಗಿದ್ದಾರೆ ಡಾ. ಸಿದ್ಧಯ್ಯ ಪುರಾಣಿಕರು. ೧೯೪೨ ರ ೨೬ ನೇಯ ಹೈದರಾಬಾದ ಸಾಹಿತ್ಯ ಸಮ್ಮೇಳನದಲ್ಲಿ 'ಎರಡು ಚಿತ್ರಗಳು' ಎಂಬ ತಮ್ಮ ಕವನ ವಾಚನಮಾಡಿದಾಗ " ಬೇಂದ್ರೆ, ಗೋಕಾಕರು ಬೆನ್ನುತಟ್ಟಿದರು ಮಾಸ್ತಿಯವರಂತೂ ಬೇರೆ ಕಡೆಗೆ ಕರೆದೊಯ್ದು ಮತ್ತೆ ಮತ್ತೆ ಓದಿಸಿ ಕೇಳಿ ಅಲ್ಲಲ್ಲಿ ತಿದ್ದಿ, 'ಬಹಳ ಚೆನ್ನಾಗಿ ಬರೆಯುತ್ತೀಯಪ್ಪಾ, ಬರೆಯುವುದನ್ನು ಬಿಡಬೇಡ, ಎಂದು ಪ್ರೋತ್ಸಾಹಿಸಿದ ' ಆ ಮಾಸ್ತಿ ಶ್ರೀನಿವಾಸರೆ ಅಂದಿನ ಕಾವ್ಯಾನಂದರಲ್ಲಿ ತಮಗೊಬ್ಬ ತಮ್ಮನನ್ನೂ ಕಂಡಿರಬೇಕು. ಮುಂದೆ ಮರುಳಸಿದ್ಧನ ಕಂತೆ ' ಹುಟ್ಟಿ ಬರುವವರೆಗೂ ಡಿ.ವಿ.ಜಿ.ಯವರು ತಮ್ಮ " ಮಂಕುತಿಮ್ಮನ " ತಮ್ಮನನ್ನು ಮರಣೋತ್ತರದಲ್ಲಿ ಕಾಯಬೇಕಾಯಿತು. " ಮತ್ತೆ ದಿ. ಅಣ್ಣಾರಾವ್ ಗುಣಮುಖಿಯವರು ಮಂತ್ರಿಗಳಾಗಲು, ನನ್ನನ್ನೂ ಬೆಂಗಳೂರಿಗೆ ಎಳೆದರು. ಬೆಂಗಳೂರಿನ ವಿಧಾನಸೌಧದಲ್ಲಿ ಶಿಕ್ಷಣ ಇಲಾಖೆಯ ಅಧೀನ ಕಾರ್ಯದರ್ಶಿ " ೧೯೬೦ ರಲ್ಲಿ ಪುರಾಣಿಕರು ಈ ಅಧೀನ ಕಾರ್ಯದರ್ಶಿಯಾಗಿದ್ದಾಗ ನಾನು ಬೆಂಗಳೂರ ಆಕಾಶವಾಣಿಯಲ್ಲಿದ್ದೆ. ನಾನು ಮಿತ್ರ ಇಟಗಿ ಅವರೂ ಸಿದ್ಧಯ್ಯನವರೂ ಬೆಂಗಳೂರು ನೆಹರೂ ನಗರದ ನೆರೆ ಹೊರೆಯ ಗೆಳೆಯರಾಗಿದ್ದೆವು. ಆಗಿನ ನಮ್ಮ ಸಾಹಿತ್ಯ ಜೀವನ ಮರೆಯದಂತಹ ಒಂದು ಸವಿಯಾದ ಸುಗ್ಗಿಯ ಕಾಲ ! ನಿತ್ಯವೂ ನಾವು ನಸುಕಿನ ಸಂಚಾರ ಕೈಕೊಂಡೆವು. ಬೆಳಗಿನ ತಿರುಗಾಟ ಆರೋಗ್ಯಕರ ಅದಕ್ಕಿಂತ ಹೆಚ್ಚಾಗಿ ಸಿದ್ಧಯ್ಯನವರ ಒಡನಾಟ ನಮಗೆ ಹೆಚ್ಚಿನ ಆಪ್ಯಾಯಕರವೆನಿಸಿತ್ತು. ಸಿದ್ಧಯ್ಯನವರ ವಿನೋದ ಪ್ರಜ್ಞೆ ನಮ್ಮ ನಸುಕಿನ ಅಲೆದಾಟಕ್ಕೆ ಸವಿ ಸೊಗಸು ತರುತ್ತಿತ್ತು. ನಿತ್ಯವೂ ಹಾಸ್ಯ, ನಿತ್ಯವೂ ವಿನೋದ–ನಿತ್ಯವೂ ನಸುಕಿನ ನಗೆಯ ಅಲೆಗಳೊಡನೆಯೆ ನಮ್ಮ ಅಲೆದಾಟ, ಇದಲ್ಲದೆ ಮಿತ್ರ ಚಕ್ರವರ್ತಿ ಅವರ ಪಂಪನ ಕಾವ್ಯವಾಚನ, ಸುಖ ಸಂಕಥಾ ವಿನೋದಕ್ಕೆ ವಿದ್ವತ್ತಿನ ಆಯಾಮ ತರುತ್ತಿತ್ತು

ಆಗಿನ ಅವರ ಆ ವಿನೋದ ಕಥನಗಳನ್ನು ಸಂಗ್ರಹಿಸಿಟ್ಟಿದ್ದರೆ ಎಂತಹ ಒಂದು ಹಾಸ್ಯ ರಸಾಯನದ ಕೊಡುಗೆ ಆಗಬಹುದಿತ್ತು ಕನ್ನಡ ಸಾಹಿತ್ಯಕ್ಕೆ !

● ಲೇಖಕರು : ●

**ಶ್ರೀ ಎನ್. ಕೆ. ಕುಲಕರ್ಣಿ ಧಾರವಾಡ**

## ಕಾವ್ಯ ಸಂದೇಶ

ಸರಕಾರೀ ನೌಕರರ ಬಗೆಗೂ ಅಷ್ಟೇ ಸುಂದರ ಸ್ವಾರಸ್ಯಹಾಸ್ಯ ಇವರದು ! ಒಬ್ಬ ಸರಕಾರೀ ಅಧಿಕಾರಿ ತಮ್ಮ ಟೂರ್‌ನಲ್ಲಿ ಯಾವಾಗಲೂ ಪತ್ನಿ ಸಮೇತವೇ ಹೋಗುತ್ತಿದ್ದರಂತೆ, ಒಮ್ಮೆ ಮೇಲಧಿಕಾರಿ "ನಿಮ್ಮ ಪತ್ನಿಗಾಗಿ ನಾವು ಪ್ರವಾಸ ವೆಚ್ಚ ಕೊಡುವದಿಲ್ಲ. ಹೀಗಿದ್ದೂ ನೀವು ಪತ್ನಿ ಸಮೇತ ಪ್ರವಾಸ ಯಾಕೆ ಕೈಕೊಳ್ಳುತ್ತೀರಿ ?" ಎಂದು ಕೇಳಿದಾಗ, "ಸಾರ್, ನಮ್ಮ ಮನೆಯಲ್ಲಿ ಒಂದೇ ಬೆಡ್ಡಿಂಗ್ ಇದೆ. ನಾವು ಪ್ರವಾಸದಲ್ಲಿ

ಆದನ್ನೇ ಒಯ್ದರೆ ಆಕೆಗೆ ಮಲಗಲು ಬೇರೆ ಹಾಸಿಗೆಇಲ್ಲ" ಎಂದನಂತೆ !

ಉರ್ದು ಸಾಹಿತ್ಯದ ಸಾರವನ್ನೂ ಹೀರಿಕೊಂಡು ತಮ್ಮ ಕಾವ್ಯ ಪ್ರಜ್ಞೆಯನ್ನು ಬಲಿಸಿಕೊಂಡಿದ್ದ ಅವರು ಅನೇಕ ಉರ್ದು ಕವಿತೆಗಳನ್ನು ಕಂಠೋಕ್ತ ಹೇಳುತ್ತಿದ್ದರು.

ತಮ್ಮ — 75 ರಲ್ಲಿ ಸಾಹಿತ್ಯದ 50 ನೆಯ ಕೃತಿಯನ್ನು ಹೊರತರುವ ತಮ್ಮ ಗುರಿಯನ್ನು "ಕಾವ್ಯಾನಂದರು ತಮ್ಮ "ಸಿಹಿ-ಕಹಿ"ಯಲ್ಲಿ [ತುಷಾರ ಡಿಸೆಂಬರ್ 19 ಮೇಲ್ಕಾಣಿಸಿದ ಅವರ ಅವತರಣಿಕೆಗಳೂ ಅವರ ವಾಕ್ಯಗಳೇ ಆಗಿವೆ.] ಅರುಹಿದ್ದಾರೆ.

"ಓದಿಬ್ರಾಹ್ಮಣನಾಗು, ಕಾದಿಕ್ಷತ್ರಿಯನಾಗು.... ಏನಾದರೂ ಆಗು ಮೊದಲು ಮಾನವನಾಗು" ಎಂಬುದೆ ಕಾವ್ಯಾನಂದರ ಕಾವ್ಯ ಸಂದೇಶ. ಆ ಸಂದೇಶಕ್ಕನುಗುಣ ವಾಗಿಯೇ ಅವರ ಜೀವನದ ಅಭಿಲಾಷೆ. ಇದುವರೆಗೆ ಒಟ್ಟು — 49 ಮೌಲಿಕ ಸಾಹಿತ್ಯ ಕೃತಿಗಳನ್ನು ಕನ್ನಡಿಗರಿಗೆ ತಮ್ಮ ಕೊಡುಗೆಯಾಗಿ ನೀಡಿದ "ಕಾವ್ಯಾನಂದರು" ಇದೇ ಕಾವ್ಯನಾಮಕರಣ ಪಡೆದು 'ಜಲಪಾತ' ದಿಂದ ಮರುಳ ಸಿದ್ಧನ ಕಂತೆ" ಯವರೆಗೆ 8 - ಕಾವ್ಯ ಸಂಗ್ರಹಗಳನ್ನು ನೀಡಿದ್ದಾರೆ. ಇದರಲ್ಲಿ ಆಧುನಿಕ ಪ್ರಜ್ಞೆಯು, ಈ ವೈಜ್ಞಾನಿಕ, ವೈಚಾರಿಕ ಯುಗದಲ್ಲೂ ದ್ವಿತೀಯವಾದರೂ ಅದ್ವಿತೀಯ ರಚನ ಸಾಹಿತ್ಯವನ್ನು ಆಧುನಿಕ ಕಾವ್ಯಕ್ಕೆ ನೀಡಿದ ರಂಗಯ್ಯ ಅನಂದಕಂದ (ಸಾಮಾಜಿಕ ಸಂವಚನಗಳು), ಮಹಾದೇವ ಬಣಕಾರ, "ಪೂರ್ಣಜ್ಞ"ನನ್ನೂ ಕೊಡುಗೆಯಿತ್ತ ಮ. ಜ. ಗಂ. ಜಯದೇವಿ ತಾಯಿ ಈ ಮೊದಲಾದ ವಚನ ಕವಿ ಕವಯಿತ್ರಿಯರಲ್ಲಿ ಕಾವ್ಯಾನಂದರ ವಚನ ಕಾವ್ಯ ವಿಶಿಷ್ಟವಾದದ್ದು, ಇವರ "ವಚನಸಂಗ್ರಹ" ಗಳಿಗೆ ಮರುಳಸಿದ್ಧನ ಕಂತೆ ಕಿರೀಟಪ್ರಾಯವಾಗಿದೆ. ಇಲ್ಲಿಯ ವಚನಗಳೆಲ್ಲವೂ ಒಂದೊಂದು ಹೂ ಅರಳಿದಂತೆ. ಸಹಜತೆಯ ಬೆಡಗು ಬಿನ್ನಾಣಗಳಿಂದ ಅಂತರಂಗವನ್ನು ಮುಟ್ಟಿ ಅಲ್ಲಿಯ ಕದತಟ್ಟುತ್ತವೆ, ತೆರೆಯುತ್ತವೆ. ಅವರ ಮಾನಸ ಸರೋವರ ಓದಿದ ಸಂತಸ ಪಡೆದು, ವಚನೋದ್ಯಾನ, ಚಿಂತನಲಹರಿ ಗದ್ಯಗಳನ್ನೋದಿ ವಚನ ವಚನವೇದದ ಸಂವಿತ್ ಸಂಪನ್ನನಾಗಿದ್ದೇನೆ. ಅವರ ವಿನೂತನ ,ಮೊದಲ ಸಂಗ್ರಹ ಜಲಪಾತಕ್ಕೆ ಮುನ್ನುಡಿ ಬರೆದ ವರಕವಿ ದ. ರಾ. ಬೇಂದ್ರೆ ಅವರು ಕಾವ್ಯಾನಂದರ ಬಂಗಾರದ ಭವಿಷ್ಯವನ್ನು ಪ್ರವಾದಿಯಂತೆ ಒಡನುಡಿದಿದ್ದಾರೆ.

"ಉದ್ದಾಮ ಸಾಹಿತಿಯೊ ಮುದ್ದಾಮ ಸಾಹಿತಿಯೋ
ಉದ್ಧಾರ ನಿನಗಾಯ್ತೆ ನಿನ್ನ ಕೃತಿಯಿಂದ ?
ತಿದ್ದಲಾರದ ಕೃತಿಯ ಬರೆದವನೆಂಬ ಎಂತು
ತಿದ್ದೀತು ಓದುಗರ — ಮರುಳಸಿದ್ಧ ?"

ಎಂದು ತಮ್ಮ ಸೀಮಿತದ ಅರಿವು ಇಟ್ಟುಕೊಂಡೇ ಮೇಲಿನ ಮಾತು ಉಸುರಿದ್ದಾರೆ ಕವಿ. ಇವರ "ಶರಣ ಚರಿತಾಮೃತ" ಬಸವಣ್ಣನವರ ಜೀವನ ಹಾಗೂ ಸಂದೇಶ "ಚಿಂತನ ಲಹರಿ" ಇವು ಕಾವ್ಯಾನಂದರ ಚೊಕ್ಕಗದ್ಯದ ಚಿನ್ನದಂತಹ ಕೃತಿಗಳು. ಈ 3 ಕೃತಿಗಳ ಓದು ನನ್ನಲ್ಲಿ ಕೃತಾರ್ಥತೆಯ, ಕೃತಕೃತ್ಯತೆಯ ಭಾವ ಮೂಡಿಸಿದೆ. ತಮ್ಮ ಕಲಬುರ್ಗಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ವಾಣಿಯಲ್ಲಿ ಆಸ್ಥಾನದ ಕಂಕಣಬೇಡದೆ, ಸಹೃದಯರ ಕಣ್ ಕಣ ಬೇಡಿರುವುದು ಅವರ ಸಾಹಿತ್ಯದ ಮುಖ್ಯ ಗುರಿಯನ್ನು ಸಾರುತ್ತಿದೆ. ಆಕಾಶವಾಣಿಗಾಗಿ ಬರೆದ ಅವರ ಗೀತರೂಪಕಗಳಲ್ಲಿ "ಗಿರಿಜಾ ಕಲ್ಯಾಣ" ಇನ್ನೂ ಅಪ್ರಕಟಿತವಾಗಿದ್ದು, ಇನ್ನೂ ಇಂತಹ ಸಾಹಿತ್ಯವು ಬೇಗ ಹೊರಬರಲಿ ಎಂದು ಹಾರೈಸುವೆ.

---

[ 33 ನೇ ಪುಟದಿಂದ ಬಂದದ್ದು ]

ನ್ನಾಗಲೀ ಗುತ್ತಿಗೆ ಕೊಟ್ಟರೆ ರೈತರಿಗೆ ಆರ್ಥಿಕ ನಷ್ಟ ತಪ್ಪಿದ್ದಲ್ಲ. ಕಾರಣ, ಸಾಧ್ಯವಾದಷ್ಟು ಪ್ರಯತ್ನಮಾಡಿ ಪರಿಪಕ್ವವಾದ ಸಮಯದಲ್ಲಿ ಹಣ್ಣು ಮತ್ತು ಕಾಯಿಪಲ್ಲೆಗಳನ್ನು ಕೊಯ್ಲು ಮಾಡಿ ಉತ್ಪನ್ನದ ಪ್ರಮಾಣಕ್ಕನುಗುಣವಾಗಿ ಮಾರಾಟ ಮಾಡುವ ಪ್ರವೃತ್ತಿ ಬೆಳಸಿಕೊಂಡರೆ ಆರ್ಥಿಕ ಪ್ರತಿಫಲ ಹೆಚ್ಚಾಗುವದರಲ್ಲಿ ಸಂದೇಹವಿಲ್ಲ.

ದೂರವಾಣಿ : 64635

ದೀಪಾವಳಿಯ ಹಾರ್ದಿಕ ಶುಭಾಶಯಗಳು

**India Auto Pins**

ಬಿ-91, ಇಂಡಸ್ಟ್ರೀಯಲ್ ಇಸ್ಟೇಟ
ಗೋಕುಲರೋಡ ಹುಬ್ಬಳ್ಳಿ—30.

— ಚಂದ್ರಶೇಖರ ಜಿ. ಲಕ್ಕುಂಡಿ
ಮಾಲಕರು.